ಜಮೀನುಗಳು ಕೊಚ್ಚಿಹೋಗಿ ಜಮೀನುಗಳು ಕೊರಕಲು ಬಿದ್ದು ರೈತರಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರ ಜಮೀನುಗಳ ಒಡ್ಡುಗಳು ಒಡೆದಿರುವುದು, ಮನೆಗಳು ಬಿದ್ದಿರುವುದಕ್ಕೆ ಸರ್ಕಾರ ಪರಿಹಾರ ಕೊಡಲು ಕೈಗೊಂಡ ಯೋಜನೆ ಯಾವುದು,

ಇ) ಶಿಗ್ಗಾಂವ–ಸವಣೂರ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಎರಡೂ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯಗಳಲ್ಲಿ ಸಿಬ್ಬಂದಿ ಭರ್ತಿ ಮಾಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು,

ಉ) ಬಿಳಿ ಸೀಮೇ ಎಣ್ಣೆ ವಿತರಕರನ್ನಾಗಿ ನೇಮಿಸಲು ಆಗದೇ ಇದ್ದಲ್ಲಿ ಪ್ರತಿ ಎರಡು ತಾಲ್ಲೂಕುಗಳಿಗೆ ಒಬ್ಬ ವಿತರಕರನ್ನಾದರೂ ನೇಮಿಸಲು ಸರ್ಕಾರ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬಂದಿದೆ

ಆ) ಅತಿದೃಷ್ಟಿಯಿಂದ ಹಾನಿಗೊಳಗಾದ ರೈತರ ಆಸ್ತಿ–ಪಾಸ್ತಿಗಳ ನಷ್ಟಕ್ಕೆ ಪ್ರಕೃತಿ ವಿಕೋಪ ಪರಿಹಾರ ನಿಧಿಯ ಮಾರ್ಗಸೂಚಿಗಳ ಅನ್ವಯ ಪರಿಹಾರ ನೀಡಲಾಗುವುದು

ಇ) ಹೌದು

ಈ) ಮುಂಬಡ್ತಿ ಮೂಲಕ ಶಿರಸ್ತೇದಾರರ ಹುದ್ದೆಗಳನ್ನು ತುಂಬಲಾಗುವುದು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ

ಉ) ಹೌದು

ಊ) ನೀಲಿ ಸೀಮ ಎಣ್ಣೆ ವಿತರಣ ಮಾಡುತ್ತಿರುವ ಕಂಪನಿಗಳ ಆಸಕ್ತ ಉಳ್ಳ ವಿತರಕರಿಗೆ ಬಿಳಿ ಸೀಮೆ ಎಣ್ಣೆ ಮಾಡಲಾಗುವುದು ಈಗಾಗಲೇ ನೀಲಿ ಸೀಮೆಎಣ್ಣೆ ವಿತರಣೆ ಮಾಡುತ್ತಿರುವ ವಿತರಕರು ಆಸಕ್ತಿ ವಹಿಸಿ ಮುಂದೆ ಬಂದಲ್ಲಿ ಬಿಳಿ ಸೀಮೆಎಣ್ಣೆ ಮಾರಾಟ ಮಾಡುವ ವಿತರಕರನ್ನು ನೇಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

849(1111) ಶ್ರೀ ಸಿಂಧೂರ್ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸವಣೂರ ತಾಲ್ಲೂಕು ಮಾದಾಪೂರ, ತವರಮೆಳ್ಳಿಹಳ್ಳಿ, ಯಲವಿಗಿ ಗ್ರಾಮಗಳ ಕೆರೆಗಳ ಹೊಳೆತ್ತುವ ಕಾಮಗಾರಿ ಪ್ರಾರಂಭಿಸಿದ್ದು, ಈ ಕಾಮಗಾರಿಗಳ ಗುತ್ತಿಗೆದಾರರ ಹೆಸರು ಹಾಗೂ ಅಂದಾಜು ಪಟ್ಟಿಯ ವಿವರವನ್ನು ನೀಡುವುದು,

ಆ) ಸವಣೂರ ತಾಲ್ಲೂಕುಗಳಲ್ಲಿ ಬರುವ ಮಾದಾಪೂರ ಹಾಗೂ ಮೋತಿ ತಲಾಬ ಕೆರೆಗಳ ಪೂರಕ ಕಾಲುವೆ, ಕಡಕೋಳ ಕೆರೆ ದುರಸ್ಥಿ ಮಂಟಗಣಿ, ಈಚಲಯಲ್ಲಾಪುರ,ಹತ್ತಿಮತ್ತೂರ, ತವರಮೆಳ್ಳಿಹಳ್ಳಿ ಕೆರೆಗಳಿಗೆ ಏತ ನೀರಾವರಿ ಹಾಗೂ ಇಚ್ಚಂಗಿ, ನಾಯಿಕೆರೂರ ಕೆರೆ ನಿರ್ಮಾಣ ಮಾಡುವ ಪ್ರಸ್ತಾವ ಸರ್ಕಾರ ಮುಂದಿದೆಯೇ,

ಇ) ಶಿಗ್ಗಾಂವ ತಾಲ್ಲೂಕುಗಳಲ್ಲಿ ಬರುವ ಕಡನ ಗ್ರಾಮದ ಬಯಲು ಗಂಗೇರಿ ಕೆರೆ, ಕಂಚಿಗೇರಿ ಕೆರೆ, ಗೊಟಿಗೋಡಿ ಗ್ರಾಮದ ರಮಿ ಕೆರೆ, ನೀರಲಗಿ ಗ್ರಾಮದ ಹೆಗ್ಗೇರಿ, ರೆಡ್ಡಿಕೆರೆ ಕೆರೆಗಳು, ಶ್ಯಾಡಂಬಿ ಗ್ರಾಮದ ದೊಡ್ಡಕೆರೆ, ಶಿಗ್ಗಾಂವ ನಾಗನೂರ ಕೆರೆ, ಕುನ್ನೂರ ಗ್ರಾಮದ ಕೆರೆ, ಅಂದಲಗಿ ಗ್ರಾಮದ ಕೆರೆ, ಮಮದಾಪುರ ಗ್ರಾಮದ ಕೆರೆ, ಚಂದಾಪುರ ಗ್ರಾಮದ ಕಳಸಲಗೇರಿ ಕೆರೆ, ಜಕ್ಕಣಕಟ್ಟಿ ಗ್ರಾಮದ ಕೆರೆ, ಹುನಗುಂದ ಗ್ರಾಮದ ಕೆರೆ, ಕೋಣನಕೇರಿ ಗ್ರಾಮದ ದೊಡ್ಡಕೆರೆ, ಮುಗಳಿಕಟ್ಟಿ ಗ್ರಾಮದ ಕೆರೆ, ತೋರುರ ಗ್ರಾಮದ ಕೆರೆ, ಅರಟಾಳ ಗ್ರಾಮದ ಕೆರೆ, ಕಾಮನಹಳ್ಳಿ ಗ್ರಾಮದ ಕೆರೆ, ಮಡ್ಲಿ ಗ್ರಾಮದ ಕೆರೆ, ಹೊಸೂರ ಗ್ರಾಮದ ಕೆರೆ, ಹುಲಿಕಟ್ಟಿ ಗ್ರಾಮದ ಕೆರೆ, ಗುಡ್ಡದ ಚನ್ನಾಪುರ ಗ್ರಾಮದ ಕೆರೆ, ಹಳೇ ಬಂಕಾಪೂರ ಗ್ರಾಮದ ಎರೆ ಕೆರೆ, ಕಲ್ಯಾಣ ಗ್ರಾಮದ ಬಕಾಸುರ ಕೆರೆ, ಯತ್ನಳ್ಳಿ ಗ್ರಾಮದ ಕೆರೆ, ಯತ್ನಳ್ಳಿ ಗ್ರಾಮದ ಬೆಲ್ಲಕಟ್ಟಿಕೆರೆ, ಶೀಲವಂತ ಸೋಮಾಪುರ ಗ್ರಾಮದ ಉರಮಂಡಿ ಕೆರೆ, ಬಸಾಪೂರ ಗ್ರಾಮದ ಹಲ್ಲೂರ ಕೆರೆ, ಅಡವಿಸೋಮಾಪುರ ಗ್ರಾಮದ ಗೌಡಗಟ್ಟಿ ಕೆರೆಗಳನ್ನು ದುರಸ್ಥಿ ಮಾಡುವುದು ಅತಿ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ,

ಈ) ಬಂದಿದ್ದಲ್ಲಿ ತೀವ್ರಗತಿಯಲ್ಲಿ ಅನುದಾನ ಬಿಡುಗಡೆಗೊಳಿಸಿ ಕಾಮಗಾರಿ ಪ್ರಾರಂಭಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಹೌದು

ಇ) ಬಂದಿದೆ ಪ್ರತಿವರ್ಷ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನ ಕ್ಕನುಗುಣವಾಗಿ ಕೆರೆಗಳ ದುರಸ್ತಿ ಕಾರ್ಯವನ್ನು ಹಂತಹಂತವಾಗಿ ಕೈಗೊಳ್ಳಲಾಗುತ್ತಿದೆ ಪ್ರಸಕ್ತ ಸಾಲಿನಲ್ಲಿ ತಡಸ ಗ್ರಾಮದ ಬೈಲಗಂಗೇರಿ ಕೆರೆ, ಗೊಟಗೋಡಿ ಕೆರೆ, ನೀರಲಗಿ ಗ್ರಾಮದ ಹೆಗ್ಗೇರಿ ರೆಡ್ಡಿಕೆರೆ, ಕಮತಗೇರಿ ಕೆರೆ, ಶ್ಯಾಡಂಬಿ ಗ್ರಾಮದ ದೊಡ್ಡಕೆರೆ, ಕುನ್ನೂರ ಗ್ರಾಮದ ಕೆರೆ ಮತ್ತು ಅಂದಲಗಿ

ಗ್ರಾಮದ ಕೆರೆಗಳ ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ

**ಮಾನ್ಯ ವಿಧಾನ ಸದಸ್ಯರಾದ ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.1111ಕ್ಕೆ ಅನುಬಂಧ**

| ಕ್ರ ಸಂ | ಕಾಮಗಾರಿಯ ಹೆಸರು | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆ ಮೊತ್ತ | ಟೆಂಡರ್ ಪ್ರಿಮಿಯಂ | ಷರಾ |
|---|---|---|---|---|---|---|
| 1 | ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಮಾದಾಪೂರ ಕೆರೆ ಸುಧಾರಣೆ ಕಾಮಗಾರಿ | ಶ್ರೀ ಎಸ್ ಜಿ ಪಾಟೀಲ್‌ಕುಲಕರ್ಣಿ ಗರಗ | 19 57 | 20 73 | 5 90% ಹೆಚ್ಚು | ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ |
| 2 | ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ತೆವರಮೆಳ್ಳಿ ಹಳ್ಳಿ ಕೆರೆ ಹಾಗೂ ಕಾಲುವೆ ಸುಧಾರಣೆ ಮತ್ತು ದುರಸ್ತಿ ಕಾಮಗಾರಿ | ಶ್ರೀ ಕೆ ಬಸವರಾಜ್, ಹುಬ್ಬಳ್ಳಿ | 14 77 | 15 62 | 5 79% ಹೆಚ್ಚು | ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ |
| 3 | ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಯಲವಿಗಿ ಕೆರೆ ಹಾಗೂ ಕಾಲುವೆ ಸುಧಾರಣೆ ಕಾಮಗಾರಿ | ಮೆ ಕರ್ನಾಟಕ ಸಿಮೆಂಟ್ ಪೈಪ್ ಫ್ಯಾಕ್ಟರಿ, ಹುಬ್ಬಳ್ಳಿ | 24 61 | 26 03 | 5 89% ಹೆಚ್ಚು | ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ |

850(1112) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ